ಈ) ಸಿವಿಲ್ ಕಾಮಗಾರಿಗಳ ಅಂದಾಜು ಪತ್ರಿಕೆ ತಯಾರಿಕೆ ಕಾರ್ಯ ಪ್ರಗತಿಯಲ್ಲಿದ್ದು, ತಕ್ಷಣವೇ ಕ್ರಿಯಾ ಯೋಜನೆಯ ಪ್ರಕಾರ ಕೆಲಸಗಳನ್ನು ಪ್ರಾರಂಭಿಸಿ ನಿಗಧಿತ ಅವಧಿಯೊಳಗೆ ಮುಕ್ತಾಯಗೊಳಿಸಲಾಗುವುದು.

598 (996) ಶ್ರೀ ಸಿದ್ದು ಸವದಿ (ಜಮಖಂಡಿ) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ತಾಲ್ಲೂಕಿನಲ್ಲಿರುವ ಸರ್ಕಾರದ ಇಲಾಖೆಗೆ ಸೇರಿದ ರಸ್ತೆಗಳು ಎಷ್ಟು;

ಆ) ಈ ಎಲ್ಲಾ ರಸ್ತೆಗಳು ಅಭಿವೃದ್ಧಿಗೆ 1–4–2006 ರಿಂದ ಇಲ್ಲಿಯವರೆಗೆ ಎಷ್ಟು ಹಣ ಮಂಜೂರಾಗಿದೆ;

ಇ) ಮಂಜೂರಾದ ಅಲ್ಪ ಹಣದಲ್ಲಿ ಬಹುತೇಕ ರಸ್ತೆಗಳನ್ನು ರಿಪೇರಿ ಮಾಡಲಾಗದೇ ಹಾಳಾಗಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಈ) ಹಾಗಿದ್ದಲ್ಲಿ ಎಲ್ಲಾ ರಸ್ತೆಗಳನ್ನು ರಿಪೇರಿ ಯಾವ ರೀತಿಯಿಂದ ಮಾಡಲಾಗುವುದು?

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಜಮಖಂಡಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಗ್ರಾಮೀಣ ರಸ್ತೆಗಳ ಸಂಖ್ಯೆ 291 ಇರುತ್ತದೆ.

ಆ) 2006–07ರಲ್ಲಿ ಜಮಖಂಡಿ ತಾಲ್ಲೂಕಿನ ಗ್ರಾಮೀಣ ರಸ್ತೆಗಳಿಗೆ ವಿವಿಧ ಯೋಜನೆಯಡಿ ಮಂಜೂರಾದ ಹಣದ ವಿವರ ಕೆಳಕಂಡಂತಿದೆ.

ರೂ.ಲಕ್ಷಗಳಲ್ಲಿ

ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ (ಲೆಕ್ಕಶೀರ್ಷಿಕೆ – 3054)	93.61
ನಬಾರ್ಡ್ ಯೋಜನೆ (ಮಾಲಿಕೆ – x)	12.00
ಗ್ರಾಮೀಣ ಸಂಪರ್ಕ ಯೋಜನೆ (ಲೆಕ್ಕ ಶೀರ್ಷಿಕೆ – 5054)	11.67

ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ	73.60
ಒಟ್ಟು	**190.88**

ಇ) ರಸ್ತೆಗಳ ದುರಸ್ತಿ ಕಾರ್ಯ ಕೈಗೊಳ್ಳುವ ಅಗತ್ಯತೆ ಕಂಡು ಬಂದಿರುತ್ತದೆ.

ಈ) ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಗ್ರಾಮೀಣ ರಸ್ತೆಗಳಲ್ಲಿ ಎಲ್ಲಾ ಡಾಂಬರು ಮತ್ತು ಜಲ್ಲಿ ರಸ್ತೆಗಳನ್ನು ಪ್ಯಾಕೇಜ್ ಮಾಡಿ ಟೆಂಡರ್ ಕರೆದು ನಿರ್ವಹಣೆ/ದುರಸ್ತಿ ಮಾಡಲು ಯೋಜಿಸಲಾಗಿದೆ.

599 (997) ಶ್ರೀ ಸಿದ್ದು ಸವದಿ (ಜಮಖಂಡಿ) :- ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ತಾಲ್ಲೂಕಿನ ತೇರದಾಳ ನಗರದಲ್ಲಿ ಆಶ್ರಯ ಯೋಜನೆಯಡಿ ಮಂಜೂರಾದ ಮನೆಗಳ ಸಂಖ್ಯೆ ಎಷ್ಟು;

ಆ) ಈ ಮನೆಗಳು ಯಾವ ಸಾಲಿನಲ್ಲಿ ಮಂಜೂರು ಆಗಿವೆ. ಈಗ ಎಷ್ಟು ಮನೆಗಳನ್ನು ಕಟ್ಟಲಾಗಿದೆ; ಉಳಿದವುಗಳನ್ನು ಯಾವಾಗ ಕಟ್ಟಲಾಗುವುದು;

ಇ) 4 ವರ್ಷಗಳಾದರೂ ಮನೆಗಳನ್ನು ಕಟ್ಟದೇ ಇರುವುದಕ್ಕೆ ಕಾರಣಗಳೇನು;

ಈ) ಈ ಎಲ್ಲಾ ಮನೆಗಳನ್ನು ಕಟ್ಟಲು ಯಾವ ಏಜೆನ್ಸಿಗೆ ಗುತ್ತಿಗೆ ನೀಡಲಾಗಿದೆ;

ಉ) ಈ ಎಲ್ಲಾ ಮನೆಗಳ ಫಲಾನುಭವಿಗಳನ್ನು ಗುರ್ತಿಸುವ ಕಾರ್ಯ ಮುಗಿದಿದೆಯೇ?

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು) :

ಅ) ಜಮಖಂಡಿ ತಾಲ್ಲೂಕಿನ ತೇರದಾಳ ಪಟ್ಟಣದಡಿ ನಗರ ಆಶ್ರಯ ಯೋಜನೆಯಡಿ ಒಟ್ಟು 737 ಮನೆಗಳು ಮಂಜೂರಾಗಿದ್ದು ವಿವರ ಇಂತಿದೆ.

ಶ್ರೇಣಿ	ಗುರಿ	ಪೂರ್ಣಗೊಂಡ ಮನೆಗಳು	ಪ್ರಗತಿಯಲ್ಲಿರುವ ಮನೆಗಳು	ಪ್ರಾರಂಭವಾಗದ ಮನೆಗಳು
1995–1996	0	0	0	0
1997–1998	50	50	0	0
1999–2000	43	43	0	0
2000–2001	43	43	0	0